ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆಎಂಎಪ್‌ಸಿ ಮುದ್ದೇಬಿಹಾಳ ಇವರ ನ್ಯಾಯಾಲಯ –

ಸಿ.ಸಿ.ನಂ.702/17

ಪಿಡಬ್ಲೂ-4 ಸಿಡಬ್ಲೂ-6,

ಸಾಕ್ಷಿದಾರನ ಹೆಸರು : ಯಮನಪ್ಪ ಹರಿಜನ್

ತಂದೆಯ ಹೆಸರು : ಮರಿಯಪ್ಪ

ವಯಸ್ಸು : 58 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಗುಂಡಕನಾಳ

ದಿನಾಂಕಃ 29-07-2019 ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆ ಎಪಿಪಿಯವರಿಂದ –</u>

ಚಾಸಾ:1 ರವರ ಪರಿಚಯ ಇರುತ್ತದೆ. ಚಾಸಾ: 8 ರಿಂದ 12 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುವುದಿಲ್ಲ, 2 ವರ್ಷದ ಹಿಂದೆ ನಾನು ಗುಂಡಕನಾಳ ಗ್ರಾಮದ ಜಾತ್ರೆಗೆ ನಾನು ಚಾಸಾ:7 ಮತ್ತು ಮೃತ ಭೀಮಪ್ಪ ನಡೆದುಕೊಂಡು ಹೋಗುತ್ತಿದ್ದೇವು. ಗುಂಡಕನಾಳ ಗ್ರಾಮ ದಿಮದ ಕೊಡಗಾನೂರ ರಸ್ತೆಯ ಮೂಲಕ ಸೈದಪ್ಪನ ಧರ್ಗಾದ ಜಾತ್ರೆಗೆ ಹೊರಟಿದ್ದೇವು. ನನ್ನ ಹಿಂದೆ ಭೀಮಪ್ಪ ನಡೆದುಕೊಂಡು ಬರುತ್ತಿರುವಾಗ ಆತನ ಹಿಂದಿನಿಂದ ಕ್ರೋಜರ ವಾಹನ ಬಂದು ಬೀಮಪ್ಪನ ಮೇಲೆ ಹಾಯಿದು ಹೋಗಿರುತ್ತದೆ. ಆಗ ಸ್ಥಳದಲ್ಲಿಯೆ ಬೀಮಪ್ಪ ಮೃತಪಟ್ಟಿರುತ್ತಾನೆ. ಸದರಿ ಅಪಘಾತದಲ್ಲಿ ಕಾಲಿನ ಮೇಲೆ ವಾಹನ ಹಾಯಿದು ಕಾಲು ಮೂಳೆ ಮುರಿತ ಆಗಿತ್ತು, ಅಪಘಾತಪಡಿಸಿದ ವಾಹನವನ್ನು ನೋಡಿರುತ್ತೇನೆ ಆದರೆ ಈಗ ಸದರಿ ವಾಹನವನ್ನು ಗುರುತಿಸಲು ಆಗುವುದಿಲ್ಲ, ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ನಂತರ ಬೀಮಪ್ಪನ್ನು ಸರಕಾರಿ ಅಸ್ಪತ್ರೆಗೆ ಸಾಗಿಸಿರುತ್ತೇವೆ. ಸದರಿ ಅಪಘಾತ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾವು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ.ಆರ್.ವಾಯ್.ಎನ್. ವಕೀಲರಿಂದ ಆರೋಪಿ ಪರ**

ಮೃತ ಬೀಮಪ್ಪ ನನಗೆ ಸಂಬಂಧಿಕನಾಗಬೇಕು. ಚಾಸಾ: 8 ರಿಂದ 12 ರವರು ನನಗೆ ಸಂಬಂಧಿಕರಾಗಬೇಕು. ಚಾಸಾ: 2 ರಿಂದ 5 ರವರು ನನ್ನ ಸಂಬಂಧಿಕರು. ನಾನು ಖಾಯಂ ಆಗಿ ಹೊನ್ನಳ್ಳಿ ಗ್ರಾಮದಲ್ಲಿ ವಾಸಿಸುತ್ತೇನೆ. ನಮ್ಮ ಗ್ರಾಮದಿಂದ ಜಾತ್ರೆಗೆ ಬರಲು ಬೆಳಿಗ್ಗೆ 8 ಗಂಟೆಗೆ ಬಿಟ್ಟಿರುತ್ತೇನೆ. ಜಾತ್ರೆ ಬೆಳಿಗ್ಗೆ ಇರುತ್ತದೆ. ಸದರಿ ಜಾತ್ರೆಯನ್ನು ಸಾಯಂಕಾಲ 5 ಗಂಟೆಯವರೆಗೆ ಮಾಡಿರುತ್ತೆನೆ. ಸದರಿ ಜಾತ್ರೆಯಲ್ಲಿ ಲಕ್ಷ ಗಟ್ಟಲೆ ಜನ ಸೇರಿರುತ್ತಾರೆ ಎಂದರೆ ಸರಿ. ಸೈದಪ್ಪನ ದರ್ಗಾದ ಹತ್ತಿರ ಸಾಕಷ್ಟು ಜನರು ಇರವುದರಿಂದ ವಾಹನ ಸಂಚಾರ ಇರುವುದಿಲ್ಲ ಎಂದರೆ ಸರಿ. ಜಾತ್ರೆಗಳ ಸಂದಂರ್ಭದಲ್ಲಿ ವಾಹನ ನಿಲುಗಡೆಗಾಗಿ ಪ್ರತ್ಯೇಕ ಸ್ಥಳ ಮಾಡಿರುತ್ತಾರೆ ಎಂದರೆ ಸರಿ. ನಾವು ಜಾತ್ರೆಯ ಗದ್ದಲದಲ್ಲಿ ಇದ್ದೇವು ಎಂದರೆ ಸರಿ. ಜಾತ್ರೆಯಲ್ಲಿ ವಾಹನ ಬರಲು ಸಾಧ್ಯವಿರುವುದಿಲ್ಲ ಎಂದರೆ ಸರಿ. ಜಾತ್ರೆಯಲ್ಲಿ ವಾಹನ ಬಂದು ಅಪಘಾತಪಡಿಸಿ ಭೀಮಪ್ಪ ಮೃತಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಶಾಲೆ ಕಲಿತಿರುವುದಿಲ್ಲ. ಘಟನಾ ಸ್ಥಳದ ಚೆಕ್ಕಬಂದಿ ಹೇಳಲು ಬರುವುದಿಲ್ಲ. ನಾನು ಮುಂದೆ ಹೋಗುತ್ತಿದ್ದು ನನ್ನ ಹಿಂದೆ ಚಾಸಾ: 7 ರಾಮಚಂದ್ರ ಆತನ ಹಿಂದೆ ಮೃತ ಭೀಮಪ್ಪ ಇದ್ದನು. ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನೋಡಿರುತ್ತೇನೆ. ಅಪಘಾತವನ್ನು ನಾನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಹೇಳಿಕೆ ನಿಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಗಿರುವುದಿಲ್ಲ. ದೂರನ್ನು ಯಾರು ಸಲ್ಲಿಸಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಚಾಸಾ:1 ರವರು ನನ್ನ ರಕ್ತ ಸಂಬಂಧಿಯಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಆರೋಪಿತನ ವಿರುಧ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ್ನು ಮತ್ತು ವಾಹವನ್ನು ಅಪಘಾತದ ಸ್ಥಳದಲ್ಲಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು

ನ್ಯಾಯಾಲಯದಲ್ಲಿ ಗುರುತಿಸುತ್ತೆನೆ ಎಂದು ಸುಳ್ಳಾಗಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ ಹೆ ಕೆ ಸರಿ ಅದೆ

ಪ್ರ.ನ್ಯಾ.ದಂ. ಮುದ್ದೇಬಿಹಾಳ.